
# ಡಿಜೆಕ್ಷನ್ ಇನ್ನೊಂದು ಪ್ರಗಾಥ



'we receive but what we give'– S.T. Coleridge

## 1

ಸೋಫದ ಮೇಲೆ ಮಲಗಿವೆ ಅಡ್ಡಾದಿಡ್ಡಿ ವಸ್ತುಗಳು – ಅರ್ಧ ಓದಿ ಪುಟದ
ಗುರುತಿಟ್ಟು ಬೋರಲು ಹಾಕಿದ ಪುಸ್ತಕ: ಡೊರೊಥಿ ವರ್ಡ್ಸ್‌ವರ್ತಳ ಡೈರಿ –
ಚಾರ್ಜ್ ಮುಗಿದ ಸೆಲ್‌ಫೋನು ಸದಾ ಬಳಸುವ ಆಸ್ತಲಿನ್ ಇನ್ಹೇಲರ್ – ಅಷ್ಟೊಂದು
ಬಳಸದ ಪೆನ್ನು ನನ್ನ ಕಂಪಾನಿಯನ್ ವಸ್ತುಗಳು
ನಾನಿಲ್ಲದೆ ಅವು ಇಲ್ಲ ಅವು ಇಲ್ಲದೆ ನಾನೂ ಇಲ್ಲ ನನ್ನ ಅವಿನಾಭಾವಗಳು ನಿನ್ನೆ
ರಾತ್ರಿಯ ಸ್ಥಿತಿ ಇವತ್ತು ಬೇರೊಂದು ಸ್ಥಿತಿ ನಿನ್ನೆ ಹೊರಟೋಯಿತು ಇಂದು ಇನ್ನೊಂದು
ಆದರೂ ಬೆಂಬಿಡದ ಒಂದು ಸಂಬಂಧ ಏನೆಂದು ಹೇಳಲಿ?

ಡಿಜೆಕ್ಷನ್: ಒಂದು ಪ್ರಗಾಥ ನಾನು ಇನ್ನೊಂದು ಪ್ರಗಾಥದ ಬಗ್ಗೆ ಯೋಚಿಸುತ್ತೇನೆ
ಇದು ಇನ್ನೊಂದು ಕಾಲ ಇನ್ನೊಂದು ದೇಶ ಆದರೂ ಡಿಜೆಕ್ಷನ್ ಒಂದೆಯೇ ಕವಿಗಳನು
ಆಗಾಗ ಬಾಧಿಸುವುದು ಇಂಗ್ಲೆಂಡ್ ಇರಲಿ ಭಾರತವಿರಲಿ
ಟಿಂಬಕ್ಟು ಇರಲಿ ಕ್ಸನಡೂ ಇರಲಿ ಮುರಿದ ದುರ್ಗವಿರಲಿ ಹಾಳುಬಿದ್ದ ದರ್ಗವಿರಲಿ
ಒಣ ಅರಳಿ ಮರದ ಕೆಳಗೆ ಅಥವ ಕೊಳಕು ಕಲ್ವರ್ಟಿನ ಮೇಲೆ

ಹೇಳಿಕೊಳ್ಳುವ ರಮಣೀಯ ನೋಟವಿಲ್ಲ ಈ ಇಲ್ಲಿ ನಾನಿರುವಲ್ಲಿ
ಬರೇ ಕಾಂಕ್ರೀಟ್ ಕಾಡು ಭಾವನೆಗಳು ಮುರುಟುತ್ತವೆ ಒಣಗುತ್ತವೆ
ಎಲ್ಲೆಲ್ಲೊ ಹೊರಟೋಗುತ್ತವೆ ಒಂದು ಚಂದ್ರನ ತೆಕ್ಕೆಯಲ್ಲಿಟ್ಟು ತೂಗುವ
ಇನ್ನೊಂದು ಚಂದ್ರನಿಲ್ಲ ನಗರದ ಧೂಮದಲ್ಲಿ ಆಕಾಶವೇ ಸ್ಪಷ್ಟವಿಲ್ಲ
ನಕ್ಷತ್ರಗಳೂ ಕಾಣಿಸುವುದಿಲ್ಲ ಇನ್ನು ಬಿರುಗಾಳಿ ಮಳೆ ಬರಲಿದೆಯೆ
ಹೇಗೆ ತಿಳಿಯಬೇಕು ಕುಸಿದ ಮನಸ್ಸನ್ನು ಎತ್ತುವುದು ಯಾರು?



ವಾಗೀಶ ಹೆಗಡೆ